



'ಮಾನಸ ಸರೋವರ' ಸಿನಿಮಾ ನೆನಪಿಸುವ ಸಂಡೂರು ಪರಿಸರದ ಸೌಂದರ್ಯ

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಮಾನಸ ಸರೋವರ' ಚಿತ್ರದ ವಿಶೇಷಗಳಲ್ಲಿ ಸಂಡೂರಿನ ಸುಂದರ ಚಿತ್ರಣಗಳೂ ಸೇರಿವೆ. ಇಡೀ ಚಿತ್ರ ಸಂಡೂರು ಪರಿಸರದ ಸುಂದರ ಹಸಿರಿನ ವೈಭವವನ್ನು ಮೋಹಕವಾಗಿ ಒಳಗೊಂಡಿದೆ.

ನಮ್ಮ ಪ್ರಯಾಣ ಆರಂಭವಾಗಿದ್ದು ತೋರಣಗಲ್ಲಿನಿಂದ. ಸಂಡೂರಿನ ಸೌಂದರ್ಯ ನೋಡಬೇಕೆಂದರೆ ತೋರಣಗಲ್ಲಿನಿಂದ ಹೋದರೆ ಒಳಿತು ಎಂಬ ಸಲಹೆಯಂತೆ ಅಲ್ಲಿಂದ ಹೊರಟೆವು. ಪ್ರಯಾಣ ಆರಂಭಿಸಿದ ಸ್ವಲ್ಪ ಸಮಯದಲ್ಲಿ ನಮಗೆ ಬಳ್ಳಾರಿಯ ಬಿಸಿಲಿನಿಂದ ದೂರವಾಗಿ ಮಲೆನಾಡಿಗೆ ಹೋದಂತೆ ಭಾಸವಾಯಿತು. ಗಣಿಯ ಆರ್ಭಟಕ್ಕೆ ನರಳಿ ಹಸಿರು ಅಲ್ಲಲ್ಲಿ ಕೆಂಪಾಗಿದ್ದರೂ ತನ್ನ ಸೌಂದರ್ಯಕ್ಕೆ ಸಾಟಿಯಿಲ್ಲ ಎಂದು ಹೇಳುವಂತಿತ್ತು. ಸುಂದರ ಬೆಟ್ಟಗಳ ನಡುವೆ ಪ್ರಯಾಣದ ಆರಂಭದಲ್ಲಿ ನಾವು ನೋಡಿದ್ದೇ ನಾರಿಹಳ್ಳ. 'ಮಾನಸ ಸರೋವರ' ಸಿನಿಮಾದ ಹಾಡು ನೆನಪಿಸುವ ಈ ಹಳ್ಳ, 70ರ ದಶಕದಲ್ಲಿ ಸುಂದರ ತಾಣವಾಗಿತ್ತು. ಗಣಿಗಾರಿಕೆಯ ನಂತರವೂ ಈಗಲೂ ಅದು ತನ್ನ ಸೊಬಗನ್ನು ಉಳಿಸಿಕೊಂಡಿದೆ.

ನಮ್ಮ ಪ್ರಯಾಣ ಸಂಡೂರಿನತ್ತ ಸಾಗಿತು. ಆರಂಭದಲ್ಲಿಯೇ ಕೂಡ್ಲಿಗೆ ರಸ್ತೆಯಲ್ಲಿ ಸ್ವಲ್ಪ ದೂರ ಸಾಗಿದರೆ ಸಿಗುವುದೇ ಶ್ರೀ ಗುಂಡಿ ನರಸಿಂಹಸ್ವಾಮಿ ದೇವಾಲಯ. ಚಿಕ್ಕ ಬೆಟ್ಟದ ಮೇಲಿರುವ ಈ ದೇವಾಲಯ ನೋಡಿಕೊಂಡು ಮೇಲಕ್ಕೆ ಹೋದರೆ ಸಂಡೂರಿನ ವ್ಯೂ ಪಾಯಿಂಟ್ ಇದೆ. ಅದರ ಸಮೀಪದಲ್ಲಿ ಸುಂದರ ಸ್ಥಳವಿದೆ ಎಂದು ಮಿತ್ರರು ಹೇಳಿದಾಗ ಕುತೂಹಲ ತೀವ್ರವಾಗಿತ್ತು. ನಮಗೆ ಕಾಣದ ಆ ಸುಂದರ ಸ್ಥಳದ ಬಗ್ಗೆ ಯೋಚನೆ ಮಾಡುತ್ತ ದೇವಾಲಯಲದ ಪಕ್ಕದ ದಾರಿಯಲ್ಲಿ ಕಣಿವೆಯ ಹಾದಿ ಇಳಿದಾಗ ನಮಗೆ ನಿಜಕ್ಕೂ ಅಚ್ಚರಿ ಕಾದಿತ್ತು. ಬಯಲುನಾಡಿನ ಆ ಸುಂದರ ಚಿತ್ರ ನಮ್ಮ ಕಣ್ಣ ಮುಂದೆ. ಎರಡು ಎತ್ತರದ ಬೆಟ್ಟಗಳ ನಡುವೆ ಕಲ್ಲಿನ ಅರಮನೆಯ ಲೋಕ ನೋಡಿದಾಗ 'ಮಾನಸ ಸರೋವರ' ಸಿನಿಮಾ ಮತ್ತೊಮ್ಮೆ ಕಣ್ಣ ಮುಂದೆ ಬಂದಂತೆ ಭಾಸವಾಯಿತು. ಅದರ ಗುಂಗಿನಲ್ಲೇ ನಾವು ಸಾಗಿದ್ದು ಕುಮಾರಸ್ವಾಮಿ ಬೆಟ್ಟದ ಹತ್ತಿರ.

ಕುಮಾರಸ್ವಾಮಿ ಬೆಟ್ಟದ ಪ್ರಯಾಣವೊಂದು ರೋಚಕ ದಾರಿ. ಸುಂದರ ಕೆಂಪು ಮಿಶ್ರಿತ ಬೆಟ್ಟದ ಮೇಲೆ ಸಾಗುವಾಗ ಹಲವು ವ್ಯೂ ಪಾಯಿಂಟ್‌ಗಳು, ಚಿಕ್ಕ ದೇವಾಲಯಗಳು ಕಾಣಸುತ್ತವೆ. ಅಲ್ಲಿಂದ ಮೇಲೆ ಸಾಗಿದಾಗ ನಮಗೆ ಸಿಗುವುದೇ ಕುಮಾರಸ್ವಾಮಿ ದೇವಾಲಯ. ಈ ಪ್ರದೇಶದಲ್ಲಿ ತಾರಕಾಸುರನನ್ನು ಕುಮಾರಸ್ವಾಮಿ ಸಂಹಾರ ಮಾಡಿದ್ದರಿಂದ ಈ ಹೆಸರು ಬಂದಿದೆ ಎಂದು ಸ್ಥಳಪುರಾಣ ಹೇಳುತ್ತದೆ. ಅಲ್ಲಿ ಪಾರ್ವತಿ ಮತ್ತು ಕುಮಾರಸ್ವಾಮಿ ದೇವಾಲಯಗಳು ಇದ್ದು, ಎರಡರಲ್ಲೂ ಸುಂದರ ಮೂರ್ತಿಗಳಿವೆ. 8ನೇ ಶತಮಾನದ ಪಾರ್ವತಿ ದೇವಾಲಯದಲ್ಲಿ 4 ಅಡಿ ಎತ್ತರದ ಮೂರ್ತಿ ಇದ್ದು, ಸೂರ್ಯ ಮತ್ತು ಯಮನ ಶಿಲ್ಪ ಸುಂದರವಾಗಿವೆ. 11ನೇ ಶತಮಾನದ ಕುಮಾರಸ್ವಾಮಿ ದೇವಾಲಯದಲ್ಲಿ ಕೈನಲ್ಲಿ ರುಂಡ ಮತ್ತು ಅಭಯಮುದ್ರೆ ಇರುವ ಮೂರ್ತಿಯಿದೆ.

ದೇಗುಲಕ್ಕೆ ಹತ್ತಿರದಲ್ಲೇ ಸುಂದರ ವ್ಯೂ ಪಾಯಿಂಟ್ ಇದ್ದು, ಅಲ್ಲಿಂದ ಇಡೀ ಸಂಡೂರಿನ ಸುಂದರ ಪರಿಸರ ಕಣ್ಣು ತುಂಬಿಕೊಳ್ಳಬಹುದು. ಸಮಯದ ಅವಕಾಶವಿದ್ದಲ್ಲಿ ಸಮೀಪದ ನವಿಲುತೀರ್ಥ, ಭೈರವ ತೀರ್ಥ, ಭೀಮ ತೀರ್ಥ, ಹರಿಶಂಕರ ದೇವಾಲಯಗಳನ್ನು ನೋಡಬಹುದು.

ಬೆಂಗಳೂರಿನಿಂದ ತೋರಣಗಲ್ಲಿಗೆ ಬಸ್ಸು, ರೈಲು ಸೌಲಭ್ಯವಿದೆ. ಅಲ್ಲಿಂದ ಸಂಡೂರಿಗೆ ಉತ್ತಮ ಸಾರ್ವಜನಿಕ ಸಾರಿಗೆ ಸಂಪರ್ಕವಿದೆ.



ಪ್ರಾಕೃತಿಕ ಸೌಂದರ್ಯದ ನಡುವೆ ಭಕ್ತಿಯ ಆಗರ ಕುಮಾರಸ್ವಾಮಿ ದೇಗುಲ